||JAI SRI GURUDEV||

# SRI ADICHUNCHANAGIRI FIRST GRADE COLLEGE

## CHANNARAYAPATNA-573 116

Date: 02-03-2016

### SCIENCE FORUM

**A BRIEF REPORT:**

On 3rd March 2016 the "Science Forum" of our college selected four students of
29/01/2016
B.Sc. to attend District Level "Kannada Science Lecture Competition" organized by Karnataka Rajya Vijnana Parishath at Government Science College, Hassan. Ms. Chaithra D.V. of Final B.Sc. was awarded III place & cash award of Rs. 500/- and selected for State Level Competition to be held in the month of March 2016.

...ಜಾವಾಣಿ ಬುಧವಾರ • ಮಾರ್ಚ್ 2, 2016

...ನಿವಾರ ಮಧ್ಯರಾತ್ರಿ ನಡೆದಿದೆ.

ತರೀಕೆರೆ ನಿವಾಸಿ ಟಿ.ಎಸ್. ರಂಗಯ್ಯ(32) ಮೃತಪಟ್ಟ ವ್ಯಕ್ತಿ ಎಂದು ಗುರುತಿಸಲಾಗಿದೆ. ಇವರು ಶನಿವಾರ ರಾತ್ರಿ 12.30ರಲ್ಲಿ ಅರಸೀಕೆರೆ ಕಡೆಯಿಂದ ಕಡೂರು ಕಡೆಗೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದರು. ರಂಗಯ್ಯ ಮೂತ್ರ ವಿಸರ್ಜನೆ ಮಾಡಲು ಕಾರಿನಿಂದ ಇಳಿದು ಮಾರ್ಗಮಧ್ಯ ಮೃತಪಟ್ಟರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕಾರಿನಲ್ಲಿ ಕುಳಿತಿದ್ದ ತರೀಕೆರೆಯ ರುದ್ರಪ್ಪ ಮತ್ತು ಶಿವಣ್ಣ ಅವರು ಅಪಾಯ ದಿಂದ ಪಾರಾಗಿದ್ದಾರೆ. ಡಿಕ್ಕಿ ಹೊಡೆದ ವಾಹನ ಯಾವುದು ಎಂಬುದು ಪತ್ತೆಯಾಗಿಲ್ಲ ಎಂದು ಬಾಣಾವರ ಎಸ್‌ಐ ರಾಜಾನಾಯಕ್ ತಿಳಿಸಿದ್ದಾರೆ.

# ಉಪನ್ಯಾಸ ಸ್ಪರ್ಧೆಗೆ ಆಯ್ಕೆ

ಚನ್ನರಾಯಪಟ್ಟಣ: ಪಟ್ಟಣದ ಆದಿ ಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಂತಿಮ ಬಿ.ಎಸ್ಸಿ ಯಲ್ಲಿ ವ್ಯಾಸಂಗ ಮಾಡುತ್ತಿರುವ ಡಿ.ವಿ. ಚೈತ್ರಾ, ಬೆಂಗಳೂರಿನಲ್ಲಿ ಮಾರ್ಚ್ 3ರಿಂದ ಎರಡು ದಿನ ನಡೆಯುವ ರಾಜ್ಯಮಟ್ಟದ ಕನ್ನಡ ವಿಜ್ಞಾನ ಉಪನ್ಯಾಸ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಹಾಸನದಲ್ಲಿ ನಡೆದ ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿ ರಾಜ್ಯಮಟ್ಟಕ್ಕೆ ಅರ್ಹತೆ ಗಳಿಸಿದ್ದಾಳೆ.

**ಇಬ್ಬರು ಆಯ್ಕೆ:** ಹಾಸನದ ಎನ್‌ಡಿಆರ್‌ಕೆ ಕಾಲೇಜು ಆಶ್ರಯದಲ್ಲಿ ಈಚೆಗೆ ಇನ್ಫೊಸಿಸ್ ಸಂಸ್ಥೆ ನಡೆಸಿದ ಕ್ಯಾಂಪಸ್ ಆಯ್ಕೆ ಪ್ರಕ್ರಿಯೆಯಲ್ಲಿ ಆದಿಚುಂಚನಗಿರಿ ಪ್ರಥಮದರ್ಜೆ ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಾದ ಎಸ್.ಆರ್. ರಶ್ಮಿ ಮತ್ತು ಎಸ್. ಸುಷ್ಮಿತಾ ಆಯ್ಕೆಯಾಗಿದ್ದಾರೆ.

12
13

||JAI SRI GURUDEV||

# SRI ADICHUNCHANAGIRI FIRST GRADE COLLEGE

## CHANNARAYAPATNA-573 116

Sri Adi Chunchanagiri First Grade College 573 116. No.______ Dt.______ Channarayapatna

Date: 29-02-2016

IQAC

SPECIAL GUEST LECTURE

**A BRIEF REPORT:**

A special guest lecture programme on **"Stock Market Investment for all"** on 27th February 2016 at HCS hall jointly organized by the Department of Commerce and Economics. The programme was commenced with the invocation by Kum. Isiri, final B.Com. Student.

Dr. H.S. Ravindra, HOD of Economics welcomed the gatherings. Sri Rudramurthy, Stock Market analyst, Bangalore was the main speaker. He spoke about the importance of Stock Marketing. Mr. Somashekar, Charted Accountant was also present in the programme.

The function was presided over by Prof. K.S. Devaraju, Principal. Prof. Austin J.S. Raj, Vice-Principal, Prof. K. Chandran, Co-ordinator, IQAC and Mr. K.M. Vijaykumar, Department of Economics were present in the inaugural function.

The function was concluded with the vote of thanks by Smt. Sowmya, Lecturer in the Department of Commerce.

ವಿಜಯ ಕರ್ನಾಟಕ VK

# ಹಣಕ್ಕಿಂತ ಸಂಸ್ಕಾರ ಮುಖ್ಯ

ವಿಕ ಚಿತ್ರಲೋಕ



ಚನ್ನರಾಯಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಬಿ.ವಿ.ರುದ್ರಮೂರ್ತಿ ಹೇಳಿದರು.

■ **ವಿಕ ಸುದ್ದಿಲೋಕ,** ಚನ್ನರಾಯಪಟ್ಟಣ

ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಎಲ್ಲರಿಗಾಗಿ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಕುರಿತಂತೆ ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಷೇರು ಮಾರುಕಟ್ಟೆ ವಿಶ್ಲೇಷಕ ಬಿ.ವಿ.ರುದ್ರಮೂರ್ತಿ ಮಾತನಾಡಿ, ಮನುಷ್ಯನಿಗೆ ಹಣ ಮುಖ್ಯ ಆದರೆ ಅದಕ್ಕಿಂತ ನಡವಳಿಕೆ ಅತಿಮುಖ್ಯವಾದುದು. ನಮ್ಮ ಜೀವನ ನಮ್ಮ ಕೈಯಲ್ಲೇ ಇದ್ದು ಇದಕ್ಕಾಗಿ ನಮಗೆ ಆಸಕ್ತಿ ಇರುವ ಕ್ಷೇತ್ರದಲ್ಲಿ ಬೆಳೆಯಬೇಕು. ಮಕ್ಕಳಿಗೆ ಶಿಕ್ಷಣ ಕೊಡಿಸುವುದರಿಂದ ಉತ್ತಮ ಸಮಾಜ ನಿರ್ಮಾಣ ಮಾಡಲು ಸಾಧ್ಯವಿದ್ದು ಆತ್ಮವಿಶ್ವಾಸ ಕಳೆದುಕೊಳ್ಳದಿರುವುದು ಸಾಧನೆಗೆ ಮಾರ್ಗವಾಗುತ್ತದೆ ಎಂದರು.

ದೇಶದ ಪ್ರಗತಿ ಅಲ್ಲಿನ ಷೇರುಮಾರುಕಟ್ಟೆಯನ್ನೂ ಅವಲಂಬಿಸಿದೆ. ಷೇರುಗಳನ್ನು ಆಸ್ತಿಯಂತೆ ಪರಿಗಣಿಸಿದೆ ಲಾಭ ಮಾಡಬಹುದು. ಷೇರು ಮಾರುಕಟ್ಟೆಯನ್ನು ಜೂಜು ಎಂದು ಕರೆಯುವುದು ತಪ್ಪು ಕಲ್ಪನೆಯಾಗಿದೆ. ವಿಶ್ವದ ಶ್ರೀಮಂತರೆಲ್ಲಾ ಈ ಮೂಲಕವೇ ಹಣ ಗಳಿಸಿರುವುದು. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಕೀಳರಿಮೆ ಇಟ್ಟುಕೊಂಡು ನಮಗೆ ಕೆಲಸ ಸಿಗುವುದಿಲ್ಲವೆಂದುಕೊಳ್ಳುವುದು ಸರಿಯಲ್ಲ. ಉಪನ್ಯಾಸಕರು ಪಠ್ಯದಲ್ಲಿನ ವಿಷಯ ಗಳಷ್ಟೇ ಅಲ್ಲದೆ ಜೀವನದ ಮೌಲ್ಯಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಡಬೇಕು ಎಂದರು. ತಮ್ಮ ಮಾತಿನುದ್ದಕ್ಕೂ ಷೇರುಮಾರುಕಟ್ಟೆಯ ಆಗುಹೋಗು ಕುರಿತಂತೆ ಮನವರಿಕೆ ಮಾಡಿದರು.

ಪ್ರಾಂಶುಪಾಲ ಪ್ರೊ.ಕೆ.ಎಸ್.ದೇವರಾಜು ಅಧ್ಯಕ್ಷತೆ ವಹಿಸಿದ್ದರು. ಉಪಪ್ರಾಂಶುಪಾಲ ಆಸ್ಟಿನ್ ಜೆಎಸ್ ರಾಜ್, ಉದಯಭಾನುಕಲಾಸಂಘದ ಕಾರ್ಯದರ್ಶಿ ಕೆ.ಎನ್.ಸೋಮಶೇಖರ್, ಡಾ.ಎಚ್.ಎಸ್.ರವೀಂದ್ರ ಇದ್ದರು. ಸಮಾರಂಭದ ನಂತರ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಯಿತು.

ರೈತರು ಕಡಿಮೆ ನೀರು ಬಳಸಿ ಹೆಚ್ಚು ಇಳುವರಿ ... ಗಳಲ್ಲಿ ಎಲ್ಲ ರೈತರನ್ನೂ ಯೋಜನೆ ವ್ಯಾಪ್ತಿಗೆ ತರುವ ಗುರಿ ... ಆಶಯ' ಎಂದು ಮೋದಿ ಹೇಳಿದರು.

...ಗೆ ಪತ್ರ

... (ಪಿಟಿಐ): ಭಾರತದಲ್ಲಿನ ಅಲ್ಪಸಂಖ್ಯಾತರ ವಿರುದ್ಧದ ...ಾರದ ಕುರಿತು ಕಳವಳ ...ಸಿರುವ ಅಮೆರಿಕದ ಪ್ರಮುಖ ... ಸಂಸದರು, ಅವರ ಮೂಲಭೂತ ಹಕ್ಕುಗಳನ್ನು ರಕ್ಷಿಸಲು ಮತ್ತು ಅಪರಾಧಿಗಳನ್ನು ಶಿಕ್ಷಿಸಲು ತತ್‌ಕ್ಷಣದ ಕ್ರಮ ತೆಗೆದುಕೊಳ್ಳುವಂತೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಆಗ್ರಹಿಸಿದ್ದಾರೆ. 10

## ದಿಗ್ವಿಜಯ್ ಸಿಂಗ್‌ಗೆ ಜಾಮೀನು

ಭೋಪಾಲ್ (ಪಿಟಿಐ): ಮಧ್ಯಪ್ರದೇಶ ಸಚಿವಾಲಯ ಸಿಬ್ಬಂದಿ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿಗ್ವಿಜಯ್ ಸಿಂಗ್ ಅವರಿಗೆ ಇಲ್ಲಿನ ನ್ಯಾಯಾಲಯ ಜಾಮೀನು ನೀಡಿದೆ. 10

ರಾಜ್ಯದ ಸಮಸ್ಯೆಗಳ ಬಗ್ಗೆ ಚರ್ಚೆಯಾಗಲಿ: ಕಾಗೋಡು 5

# ಆರ್ಥಿಕ ಪ್ರಗತಿ: ಸ್ಟಾಕ್ ಮಾರ್ಕೆಟ್ ಪಾತ್ರ ಮುಖ್ಯ

ಚನ್ನರಾಯಪಟ್ಟಣ: 'ದೇಶದ ಆರ್ಥಿಕ ಪ್ರಗತಿ ಸ್ಟಾಕ್ ಮಾರ್ಕೆಟ್ ಅವಲಂಬಿಸಿದೆ' ಎಂದು ಹೂಡಿಕೆ ತಜ್ಞ ಬಿ.ವಿ. ರುದ್ರಮೂರ್ತಿ ಹೇಳಿದರು.

ಪಟ್ಟಣದಲ್ಲಿ ಆದಿಚುಂಚನಗಿರಿ ಪ್ರಥಮದರ್ಜೆ ಕಾಲೇಜಿನ ಅರ್ಥಶಾಸ್ತ್ರ, ವಾಣಿಜ್ಯಶಾಸ್ತ್ರ ವಿಭಾಗದ ಸಹಯೋಗದಲ್ಲಿ ಶನಿವಾರ 'ಸ್ಟಾಕ್ ಮಾರ್ಕೆಟ್ ಹೂಡಿಕೆ' ಕುರಿತು ಏರ್ಪಡಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸ್ಟಾಕ್ ಮಾರ್ಕೆಟಿಂಗ್ ಬಗ್ಗೆ ಚೆನ್ನಾಗಿ ತಿಳಿದುಕೊಳ್ಳಬೇಕು. ಜತೆಗೆ, ವಿಶ್ಲೇಷಣೆ ಅಗತ್ಯ. ಅದರ ಬಗ್ಗೆ ಸಮರ್ಪಣಾ ಮನೋಭಾವ ಇರಬೇಕು. ಸ್ಟಾಕ್ ಮಾರ್ಕೆಟ್‌ನಿಂದ ದೇಶದ ವಿವಿಧ ಕ್ಷೇತ್ರದಲ್ಲಿ ಬಂಡವಾಳ ಹೂಡಬಹುದು' ಎಂದರು.

'ಜ್ಞಾನದಿಂದ ಹಣ ಸಂಪಾದನೆ ಮಾಡಬಹುದು. ಅರ್ಹತೆ ಇದ್ದರೆ ಉದ್ಯೋಗ ದೊರಕುತ್ತದೆ. ನಮ್ಮ ಜೀವನ ರೂಪಿಸಿಕೊಳ್ಳುವ ಶಕ್ತಿ ನಮ್ಮ ಕೈಯಲ್ಲಿದೆ. ಇಂದಿನ ಸ್ಪರ್ಧಾತ್ಮಕ ಜಗತ್ತಿಗೆ ನಮ್ಮನ್ನು



ಚನ್ನರಾಯಪಟ್ಟಣದಲ್ಲಿ ಆದಿಚುಂಚನಗಿರಿ ಪ್ರಥಮದರ್ಜೆ ಕಾಲೇಜಿನಲ್ಲಿ ಶನಿವಾರ 'ಸ್ಟಾಕ್ ಮಾರ್ಕೆಟ್ ಹೂಡಿಕೆ' ಕುರಿತು ಏರ್ಪಡಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಹೂಡಿಕೆ ತಜ್ಞ ಬಿ.ವಿ. ರುದ್ರಮೂರ್ತಿ ಮಾತನಾಡಿದರು

ನಾವು ಒಡ್ಡಿಕೊಳ್ಳಬೇಕು. ಜೀವನದಲ್ಲಿ ಹಣ ಬೇಕು ನಿಜ. ಅದರ ಜತೆಗೆ ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳುವುದು ಅಗತ್ಯ ಎಂದು ಹೇಳಿದರು.

ವಿದ್ಯಾರ್ಥಿಗಳಿಗೆ ಎಂದಿಗೂ ನಕಾರಾತ್ಮಕ ಧೋರಣೆ ಸಲ್ಲದು. ಕೇವಲ ಪಠ್ಯಕ್ರಮಕ್ಕೆ ಮಾತ್ರವಲ್ಲದೆ ಪ್ರಸಕ್ತ ವಿದ್ಯಮಾನಗಳತ್ತ ಗಮನ ಹರಿಸಬೇಕು' ಎಂದು ಸಲಹೆ ನೀಡಿದರು.

ಪ್ರಾಂಶುಪಾಲ ಕೆ.ಎಸ್. ದೇವರಾಜು, ಉಪ ಪ್ರಾಂಶುಪಾಲ ಆಸ್ಟಿನ್ ಜೆ.ಎಸ್. ರಾಜ್ ಕಾರ್ಯಕ್ರಮದಲ್ಲಿದ್ದರು.

Sri Adi Chunchana... 573 116 Channarayapatna
No.
Dt.

# SRI ADICHUNCHANAGIRI FIRST GRADE COLLEGE

CHANNARAYAPATNA-573 116

Date: 25-01-2016

PLANNING FORUM

DEPARTMENT OF ECONOMICS

**A BRIEF REPORT:**

On 22nd Jan. 2016 the "Planning Forum" of the Department of Economics had arranged a special guest lecture programme at HCS A/V Hall. The topic of the guest lecture was "The Sources of the Renewable Energy & its Conservation" the speaker of this programme was Mr. Ravi K. Senior Faculty, Mahathma Gandhi Institute of Renewable Energy and Development (MGIRED).

Mr. K. Ravi inaugurated the function and gave an elaborate lecture on the topic. In his lecture, spoke about the importance of solar energy and its utilization in the daily life in place of non-renewable energy sources.

The function was presided over by Prof K.S. Devaraju, Principal. He too spoke the importance of Solar Energy and other alternate energy. Prof. Austin J.S. Raj, Vice-Principal, Prof. S.B. Shivakumar, HOD of Sociology, Prof. K. Chandran, HOD of Mathematics & IQAC Co-ordinator were present.

Dr. H.S. Ravindra, HOD of Economics welcomed the gathering and introduced Mr. K.Ravi. Mr. K.M. Vijaykumar proposed the vote of thanks. The programme was compeered by Ms. Rakshitha J.J.

25.01.2016.

Adichunchanagiri First Grade College
573 116.
Channarayapatna

॥ಜೈ ಶ್ರೀ ಗುರುದೇವ್॥

ಪರಮಪೂಜ್ಯ ಜಗದ್ಗುರು ಪದ್ಮಭೂಷಣ ಶ್ರೀ ಶ್ರೀ ಶ್ರೀ ಡಾ॥ ಬಾಲಗಂಗಾಧರನಾಥ ಮಹಾ ಸ್ವಾಮೀಜಿಯವರ ಕೃಪಾಶೀರ್ವಾದಗಳೊಂದಿಗೆ ಹಾಗೂ
ಸಂಸ್ಥಾಪಕರಾದ ಶ್ರೀ ಹೆಚ್.ಸಿ.ಶ್ರೀಕಂಠಯ್ಯನವರ ಸ್ಮರಣೆಯೊಂದಿಗೆ ಮತ್ತು
ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ನಿರ್ಮಲಾನಂದನಾಥ ಮಹಾ ಸ್ವಾಮೀಜಿಯವರ ಮತ್ತು
ಶ್ರೀ ಶ್ರೀ ಶಂಭುನಾಥಸ್ವಾಮೀಜಿಯವರು ಕಾರ್ಯದರ್ಶಿಗಳು, ಶ್ರೀ ಆದಿಚುಂಚನಗಿರಿ ಶಾಖಾ ಮಠ, ಹಾಸನ
ಆಶೀರ್ವಾದದೊಂದಿಗೆ, ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು ಚನ್ನರಾಯಪಟ್ಟಣ, ಹಾಸನ ಜಿಲ್ಲೆ.ಹಾಗೂ
ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಹಾಗೂ ಅಭಿವೃದ್ಧಿ ಸಂಸ್ಥೆ, ಬೆಂಗಳೂರು. ಇವರ ಸಂಯುಕ್ತಾಶ್ರಯದಲ್ಲಿ

ವಿಶೇಷ ಉಪನ್ಯಾಸ

ಅರ್ಥಶಾಸ್ತ್ರ ವಿಭಾಗ ಯೋಜನಾ ವೇದಿಕೆ

# "ಪುನರ್ ನವೀಕರಿಸಬಹುದಾದ ಇಂಧನ ಮೂಲಗಳ ಪರಿಚಯ ಮತ್ತು ಸಂರಕ್ಷಣೆ"

ಪ್ರಾರ್ಥನೆ:

ಸ್ವಾಗತ: ಡಾ.ಹೆಚ್.ಎಸ್.ರವೀಂದ್ರ,
ಮುಖ್ಯಸ್ಥರು, ಅರ್ಥಶಾಸ್ತ್ರ ವಿಭಾಗ

ಉದ್ಘಾಟನೆ: ಶ್ರೀ ರವಿ.ಕೆ.
ಹಿರಿಯ ಪ್ರಬಂಧಕರು,
ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಹಾಗೂ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.

ಅಧ್ಯಕ್ಷತೆ: ಪ್ರೊ.ದೇವರಾಜು.ಕೆ.ಎಸ್.
ಪ್ರಾಂಶುಪಾಲರು,
ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು,
ಚನ್ನರಾಯಪಟ್ಟಣ

ಉಪಸ್ಥಿತರು:*ಪ್ರೊ.ಆಸ್ಟಿನ್.ಜೆ.ಎಸ್.ರಾಜ್ ಉಪಪ್ರಾಂಶುಪಾಲರು,
*ಪ್ರೊ.ಎಸ್.ಬಿ.ಶಿವಕುಮಾರ್
*ಪ್ರೊ.ಕೆ.ಚಂದ್ರನ್

ವಂದನಾರ್ಪಣೆ: ಶ್ರೀ ಕೆ.ಎಂ.ವಿಜಯಕುಮಾರ್

"ಎಲ್ಲರಿಗೂ ಆದರದ ಸುಸ್ವಾಗತ"

ಡಾ.ಹೆಚ್.ಎಸ್.ರವೀಂದ್ರ
ಮುಖ್ಯಸ್ಥರು, ಅರ್ಥಶಾಸ್ತ್ರ ವಿಭಾಗ

ಪ್ರೊ.ಕೆ.ಎಸ್.ದೇವರಾಜು
ಪ್ರಾಂಶುಪಾಲರು

ದಿನಾಂಕ:-22-01-2016
ಸಮಯ:ಬೆಳಿಗ್ಗೆ 11.30

ಸ್ಥಳ:-ಹೆಚ್.ಸಿ.ಎಸ್.ಸಭಾಂಗಣ ಚ.ರಾ.ಪಟ್ಟಣ

ನಿರೂಪಣೆ: ಕು.ರಕ್ಷಿತ ಜೆ.ಜೆ.

...ವಾಣಿ ಶನಿವಾರ • ಜನವರಿ 23, 2016

Sri Adichunchanagiri First Grade College ... 573 116 ... Channarayapatna

ನವೀಕರಿಸಬಹುದಾದ ಇಂಧನ ಮೂಲಗಳ ಬಗ್ಗೆ ಜಾಗೃತಿ ಮೂಡಿಸಲು ಸಲಹೆ

# ಇಂಧನ, ಪರಿಸರ ಸಂರಕ್ಷಣೆ ಅಗತ್ಯ

ಪ್ರಜಾವಾಣಿ ವಾರ್ತೆ

**ಚನ್ನರಾಯಪಟ್ಟಣ:** ನವೀಕರಿಸಬಹುದಾದ ಇಂಧನ, ಇಂಧನ ಸಂರಕ್ಷಣೆ, ಅಂತರ್ಜಲ ಸಂರಕ್ಷಣೆ ಹಾಗೂ ಪರಿಸರ ಕಾಪಾಡುವ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಮೂಲಕ ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಒತ್ತು ನೀಡಬೇಕಿದೆ ಎಂದು ಬೆಂಗಳೂರಿನ ಮಹಾತ್ಮಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯ ಹಿರಿಯ ...ಪನ್ಯಾಸಕ ಕೆ. ರವಿ ಹೇಳಿದರು.

ಪಟ್ಟಣದ ಆದಿಚುಂಚನಗಿರಿ ಪ್ರಥಮದರ್ಜೆ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ವತಿಯಿಂದ ಶುಕ್ರವಾರ ಏರ್ಪಡಿಸಿದ್ದ 'ನವೀಕರಿಸಬಹುದಾದ ಇಂಧನ ಮೂಲಗಳ ಪರಿಚಯ ಮತ್ತು ಸಂರಕ್ಷಣೆ' ಕುರಿತು ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದೇಶದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕಲ್ಲಿದ್ದಲಿನ ಮೂಲಕ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಮುಂದೊಂದು ದಿನ ಈ ಸಂಪನ್ಮೂಲ ಬರಿದಾಗುತ್ತದೆ. ಆಗ ಮುಂದೇನು ಮಾಡಬೇಕು? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದಕ್ಕೆ ಪರ್ಯಾಯವಾಗಿ ಸೌರಶಕ್ತಿಯಿಂದ ವಿದ್ಯುತ್ ಉತ್ಪಾದನೆ ಮಾಡುವುದರಿಂದ ಸಮಸ್ಯೆ ನಿವಾರಣೆಯಾಗುತ್ತದೆ. ಜೊತೆಗೆ ಇದು ಪರಿಸರ ಸ್ನೇಹಿಯಾಗಿದೆ ಎಂದು ಹೇಳಿದರು.

ನವೀಕರಿಸಬಹುದಾದ ಇಂಧನ, ಸೌರಶಕ್ತಿ, ಪವನಶಕ್ತಿ ಮೂಲಕ ವಿದ್ಯುತ್ ಉತ್ಪಾದನೆಗೆ ಜಗತ್ತಿನ ಬಹುತೇಕ ರಾಷ್ಟ್ರಗಳು ಮಹತ್ವ ನೀಡುತ್ತಿವೆ. ಸೌರಶಕ್ತಿಯಿಂದ ಮನೆ ಬಳಕೆ, ಕೃಷಿ ಚಟುವಟಿಕೆಗೆ ವಿದ್ಯುತ್ ಬಳಸಬಹುದು. ಹೊಂಗೆ, ಬೇವಿನ ಬೀಜದಿಂದ ಇಂಧನ ತಯಾರಿಸಬಹುದು. ನವೀಕರಿಸಬಹುದಾದ ಇಂಧನ ಮೂಲಗಳ ಬಗ್ಗೆ ಗ್ರಾಮೀಣ ಪ್ರದೇಶದಲ್ಲಿ ಸಂಸ್ಥೆ ವತಿಯಿಂದ ಜಾಗೃತಿ ಮೂಡಿಸಲಾಗುತ್ತಿದೆ. ಇದರ ವ್ಯಾಪ್ತಿ ಮತ್ತಷ್ಟು ವಿಸ್ತರಿಸಲಾಗುವುದು ಎಂದರು.

ಕಾಲೇಜಿನ ಪ್ರಾಂಶುಪಾಲ ಕೆ.ಎಸ್. ದೇವರಾಜು ಮಾತನಾಡಿ, ಜ್ಞಾನದ ಮೂಲ ಯಾವುದೇ ಇರಲಿ, ಅದನ್ನು ಸ್ವೀಕರಿಸಿ ಪ್ರಪಂಚದ ಏಳಿಗೆಗೆ ಬಳಸಬೇಕು. ನವೀಕರಿಸಬಹುದಾದ ಇಂಧನ ಕಾಪಾಡಬೇಕು ಎಂದರು.

ಉಪಪ್ರಾಂಶುಪಾಲ ಅಶ್ವಿನ್ ಜೆ.ಎಸ್. ರಾಜ್ ಮಾತನಾಡಿದರು. ವಿದ್ಯಾರ್ಥಿಗ...ಳೊಂದಿಗೆ ಸಂವಾದ ನಡೆಯಿತು. ಡಾ.ಎಚ್.ಎಸ್. ರವೀಂದ್ರ, ಕೆ.ಎಂ... ವಿಜಯಕುಮಾರ್, ಜೆ.ಜೆ. ರಕ್ಷಿತ... ಇತರರು ಇದ್ದರು.



ಚನ್ನರಾಯಪಟ್ಟಣದ ಆದಿಚುಂಚನಗಿರಿ ಪ್ರಥಮದರ್ಜೆ ಕಾಲೇಜಿನಲ್ಲಿ ಶುಕ್ರವಾರ ಏರ್ಪಡಿಸಿದ್ದ ಉಪನ್ಯಾಸ ಕಾರ್ಯಕ್ರಮಕ್ಕೆ ಬೆಂಗಳೂರಿನ ಎಂಜಿಐಆರ್‌ಇಡಿ ಹಿರಿಯ ಉಪನ್ಯಾಸಕ ಕೆ. ರವಿ ಚಾಲನೆ ನೀಡಿದರು

### ಮುಖ್ಯಾಂಶಗಳು

- ಭವಿಷ್ಯದಲ್ಲಿ ಸಂಪನ್ಮೂಲ ಕೊರತೆ- ಕಳವಳ
- ಗ್ರಾಮೀಣ ಜನರಲ್ಲಿ ಅರಿವು ಅಗತ್ಯ
- ಸೌರಶಕ್ತಿ ಪರಿಸರಸ್ನೇಹಿ ವಿದ್ಯುತ್ ಮೂಲ

---

## ■ ಸೌರಶಕ್ತಿ ಉತ್ಪಾದನೆಗೆ ಸರ್ಕಾರ ...

**ಚನ್ನರಾಯಪಟ್ಟಣ:** ಸೌರಶಕ್ತಿ ಬಳಸಿಕೊಳ್ಳಲು ಸರ್ಕಾರ ಸಹಾಯಧನ ನೀಡಿ ಉತ್ತೇಜಿಸುತ್ತಿದ್ದು ಸೌರ ಶಕ್ತಿಯನ್ನು ಮನೆಯಲ್ಲಿಯೇ ಉತ್ಪಾದನೆ ಮಾಡಬಹುದಾಗಿದೆ. ಇದರಿಂದ ಮಾಲಿನ್ಯವನ್ನು ತಪ್ಪಿಸಬಹುದು ಎಂದು ಮಹಾತ್ಮ ಗಾಂಧೀಜಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ ಹಿರಿಯ ಪ್ರಾಧ್ಯಾಪಕ ಕೆ.ರವಿ ತಿಳಿಸಿದರು.

ಪಟ್ಟಣದ ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ...ಜನಾ ವೇದಿಕೆಯಿಂದ ವಿಧ್ಯಾರ್ಥಿಗಳಲ್ಲಿ ಪುನರ್ ನವೀಕರಿಸಬಹುದಾದ ಇಂಧನ ಮೂಲಗಳ ಪರಿಚಯ ಮತ್ತು ಸಂರಕ್ಷಣೆ ಕುರಿತಾಗಿ ಹಮ್ಮಿಕೊಳ್ಳಲಾಗಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದ ಅವರು, ಮನೆಗಳ ಮೇಲ್ಚಾವಣಿ, ಕೃಷಿ ಉಪಯೋಗಕ್ಕೆ ಬಾರದ ಜಮೀನು ಹಾಗೂ ನೀರಾವರಿ ಯೋಜನೆಗಳ ನಾಲೆಗಳ ಮೇಲೆ ಸೌರವಿದ್ಯುತ್ ಉತ್ಪಾದಿಸಬಹುದು ಎಂದರು.

ನವೀಕರಿಸಲಾಗದ ಇಂಧನಗಳಾದ ಪೆಟ್ರೋಲ್, ಡೀಸೆಲ್ ಹಾಗೂ ಕಲ್ಲಿದ್ದಲು ಇನ್ನಿತರೆ ಇಂಧನಗಳಿಂದ ಪರಿಸರ ಮಲಿನಗೊಳ್ಳುತ್ತಿದೆ. ಪರಿಸರ ಅಸಮತೋಲನದಿಂದ ಅಕಾಲಿಕ ಮಳೆ, ನೆರೆ, ಪ್ರವಾಹ ಇನ್ನಿತರೆ ವೈಪರೀತ್ಯಗಳು ಹೆಚ್ಚಾಗುತ್ತಿದ್ದು ಪರಿಸರಕ್ಕೆ ಪೂರಕವಾದ ಜೀವನ ನಡೆಸಬೇಕು ಎಂದು ತಿಳಿಸಿದರು.

ಪ್ರಸ್ತುತ ಬಳಸುತ್ತಿರುವ ಇಂಧನ ಮೂಲಗಳು ಮುಂದಿನ 100 ವರ್ಷಗಳಲ್ಲಿ ಬರಿದಾಗುವ



ಚನ್ನರಾಯಪಟ್ಟಣದ ಆದಿಚು... ಮೂಲಗಳ ಪರಿಚಯ ಮತ್ತು... ಪ್ರಾಚಾರ್ಯ ಕೆ.ಎಸ್.ದೇವ...

ಹಿನ್ನೆಲೆಯಲ್ಲಿ ಪ್ರಪಂಚದ ... ಈಗಿನಿಂದಲೇ ನವಿಕರಿಸಬಹು... ಮೊರೆ ಹೋಗಬೇಕಾದುದು ... ಬಳಸುತ್ತಿರುವ ಇಂಧನ ಮೂಲ... ಪೆಟ್ರೋಲಿಯಂ ಉತ್ಪನ್ನಗಳ ಬ...

---



**ಉಡುಪಿ:** ಉಡುಪಿ ಕೃಷ್ಣಮಠದ ಪರ್ಯಾಯದ ನಿಮಿತ್ತ ಪ್ರಥಮ ಬಾರಿಗೆ ಕೊಡಮಾಡುತ್ತಿರುವ ಪ್ರಥಮ ರಾಷ್ಟ್ರರತ್ನ ಪ್ರಶಸ್ತಿಯನ್ನು ಇನ್ಫೋಸಿಸ್ ಸಂಸ್ಥಾಪಕ ನಾರಾಯಣಮೂರ್ತಿಯವರಿಗೆ ಶನಿವಾರ ಪ್ರದಾನ ಮಾಡಲಾಯಿತು. ಈ ವೇಳೆ ಮಾತನಾಡಿದ ನಾರಾಯಣಮೂರ್ತಿ, ಪೇಜಾವರ ಸ್ವಾಮೀಜಿಯುವರು ತಮ್ಮ ಮೇಲೆ ತೋರಿದ ಕರುಣೆ ದೊಡ್ಡದು ಎಂದರು. ರಾಷ್ಟ್ರಮಟ್ಟದಲ್ಲಿ ಗುರುತಿಸಲಾದವರಿಗೆ ರಾಷ್ಟ್ರರತ್ನ ಪ್ರಶಸ್ತಿ ನೀಡಲಾಗುವುದು. ನಾರಾಯಣ ಮೂರ್ತಿ ಅವರಿಗೆ ಈ ಪ್ರಥಮ ಪ್ರಶಸ್ತಿ ನೀಡಲು ಸಂತೋಷಿಸುತ್ತಿದ್ದೇವೆ ಎಂದು ಪರ್ಯಾಯ ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥರು ಹೇಳಿದರು.

## ರಾಜ್ಯದಲ್ಲಿ ಹೈಅಲರ್ಟ್, ರೆಡ್ ಅಲರ್ಟ್: ಪರಂ

**ತುಮಕೂರು:** ಗಣರಾಜ್ಯೋತ್ಸವ ದಿನದಂದು ರಾಜ್ಯದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಹೈ ಅಲರ್ಟ್ ಘೋಷಣೆ ಮಾಡಿದ್ದು ಅತಿ ಸೂಕ್ಷ್ಮ ಪ್ರದೇಶಗಳಲ್ಲಿ ರೆಡ್ ಅಲರ್ಟ್ ಘೋಷಣೆ ಮಾಡಲಾಗಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಪೊಲೀಸ್ ಇಲಾಖೆ ನೀಡಿರುವ ಮಾಹಿತಿ ಮೇಲೆ ರಾಜ್ಯದ 300ಕ್ಕೂ ಹೆಚ್ಚು ಪ್ರದೇಶಗಳನ್ನು ಸೂಕ್ಷ್ಮ ಪ್ರದೇಶಗಳೆಂದು ಗುರುತಿಸಲಾಗಿದೆ ಎಂದು ತಿಳಿಸಿದರು.

## ಸಾಹಿತ್ಯ ಸಂಭ್ರಮದ

---

...ಟರ್ಕಿ ಪೊಲೀಸರು, ಬಳಿಕ ಅವರೆಲ್ಲರನ್ನೂ ಭಾರತಕ್ಕೆ ಗಡೀಪಾರು ಮಾಡಿದ್ದರು. ಆತ ಆಗ ಐಸಿಸ್ ಸೇರಲು ಸಿರಿಯಾಗೆ ಹೊರಟಿದ್ದ ಎಂದು ಎನ್‌ಐಎ ಮೂಲಗಳು ತಿಳಿಸಿವೆ.

**ಪ್ರವಾಸಿ ವೀಸಾದಲ್ಲಿ ಟರ್ಕಿಗೆ ಹೋಗಿದ್ದ:** ...ಮೂಲದ ಅಬ್ದುಲ್ ಅಹದ್, ಅ... ಕ್ಯಾಲಿಫೋರ್ನಿಯಾ ಕೆನಡಿ-ವ... ವಿಶ್ವವಿದ್ಯಾಲಯದಲ್ಲಿ ಕಂಪ್ಯೂಟರ್ ಸೈನ್ಸ್ ವಿಷ... ಸ್ನಾತಕೋತ್ತರ ಪದವಿ ಪಡೆದಿದ್ದ. ಆನಂತ... ವರ್ಷ ಅಮೆರಿಕದ ಸಾಫ್ಟ್‌ವೇರ್ ಕಂಪ... ಕೆಲಸ ಮಾಡಿ ಬಳಿಕ ಬೆಂಗಳೂರಿನ ಸಾಫ... ಕಂಪನಿಯೊಂದರಲ್ಲಿ ಉದ್ಯೋಗ ಪಡೆದು ...

## 'ನಾನು ಮ...

### ■ ಬಿಜೆಪಿ ಸಭೆ...

**ಬೆಂಗಳೂರು:** ಈ ದೇಶದಲ್ಲಿ ನ... ಅಥವಾ ಎಸ್ಸಿ-ಎಸ್‌ಟಿ ಆಗಿ ಹುಟ್ಟಬೆ... ಅಷ್ಟರಮಟ್ಟಿಗೆ ಸಮಾಜದಲ್ಲಿ ಹಿಂ... ಮೇಲೆ ದಬ್ಬಾಳಿಕೆ ಕಂಡು ರೋಸಿಹೋ... ಎಂದು ನಿವೃತ್ತ ಐಎಎಸ್ ಅಧಿಕಾರಿ ... .ಜಯರಾಂ ಅಸಮಾಧಾನ ಹೊರಹಾ...

ನಗರದ ರೀಜಾಯ್ಸ್ ಹೋ... ರಾಜ್ಯ ಬಿಜೆಪಿ ಹಿಂದುಳಿದ ... ಮೋರ್ಚಾ ಶನಿವಾರ ಹಮ್ಮಿ... 'ಹಿಂದುಳಿದ ಸಮುದ...

||JAI SRI GURUDEV||

# SRI ADICHUNCHANAGIRI FIRST GRADE COLLEGE

## CHANNARAYAPATNA-573 116

Date: 25-01-2016

### PLANNING FORUM
### DEPARTMENT OF ECONOMICS

**A BRIEF REPORT:**

On 22nd Jan. 2016 the "Planning Forum" of the Department of Economics had arranged a special guest lecture programme at HCS A/V Hall. The topic of the guest lecture was "The Sources of the Renewable Energy & its Conservation". The speaker of the programme was Mr. K. Ravi, Senior Faculty, Mahathma Gandhi Institute of Renewable Energy and Development (MGIRED).

Mr. K. Ravi inaugurated the function and gave an elaborate lecture on the topic. He spoke about the importance of solar energy and its utilization in the daily life in place of non-renewable energy sources. After concluding his lecture he gave sufficient time for the students to interact with him.

The function was presided over by Prof K.S. Devaraju, Principal. He too spoke the importance of Solar Energy and other alternate energy. Prof. Austin J.S. Raj, Vice-Principal, Prof. S.B. Shivakumar, HOD of Sociology, Prof. K. Chandran, HOD of Mathematics & IQAC Co-ordinator were present.

Dr. H.S. Ravindra, HOD of Economics welcomed the gathering and introduced Mr. K.Ravi. Mr. K.M. Vijaykumar proposed the vote of thanks. The programme was compeered by Ms. Rakshitha J.J.

Prof. E. Naganna, the NSS Officer had arranged the saplings to be planted in the campus the make the function more relevant. All the saplings were placed in the different corners of the campus by the guest and teachers.

ಸರಕಾರಿ ವಿಜ್ಞಾನ ಕಾಲೇಜಿನಲ್ಲಿ ಅಂತರ ಕಾಲೇಜು ಕನ್ನಡದಲ್ಲಿ ವಿಜ್ಞಾನ ಉಪನ್ಯಾಸ ಸ್ಪರ್ಧೆ

# ಕನ್ನಡದಲ್ಲಿ ಬೋಧನೆ ಅನಿವಾರ್ಯ

**ವಿಕ ಸುದ್ದಿಲೋಕ** ಹಾಸನ

ಮೂಲ ವಿಜ್ಞಾನದಲ್ಲಿ ವಿದ್ಯಾರ್ಥಿಗಳು ಬಹಳ ಹಿಂದುಳಿದಿದ್ದು ಅವರಿಗೆ ಪ್ರಾಥಮಿಕ ಹಂತದಿಂದ ಮೂಲ ಶಿಕ್ಷಣದ ಬಗ್ಗೆ ಆಸಕ್ತಿ ಮೂಡಿಸುವ ಅಗತ್ಯವಿದೆ ಎಂದು ಕರ್ನಾಟಕ ವಿಜ್ಞಾನ ಪರಿಷತ್‌ನ ಜಿಲ್ಲಾ ಸಂಚಾಲಕ ಶ್ರೀನಿವಾಸ್ ನಡೀಕರ್ ಅಭಿಪ್ರಾಯ ವ್ಯಕ್ತಪಡಿಸಿದರು.

ಕ್ಯಾಂಪಸ್

ನಗರದ ಸರಕಾರಿ ವಿಜ್ಞಾನ ಕಾಲೇಜಿನಲ್ಲಿ ಸಸ್ಯ ಶಾಸ್ತ್ರ ವಿಭಾಗ, ಕರ್ನಾಟಕ ವಿಜ್ಞಾನ ಪರಿಷತ್ ವತಿಯಿಂದ ಆಯೋಜಿಸಿದ್ದ ಅಂತರ ಕಾಲೇಜುಗಳ ಕನ್ನಡದಲ್ಲಿ ವಿಜ್ಞಾನ ಉಪನ್ಯಾಸ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದರು.

ಇಂದಿನ ವಿದ್ಯಾರ್ಥಿಗಳಿಗೆ ಮೂಲ ವಿಜ್ಞಾನದ ಅರಿವಿನ ಕೊರತೆ ಇದ್ದು, ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ವಿಜ್ಞಾನವನ್ನು ಬೋಧಿಸುವ, ಅರ್ಥೈಸುವ ಅನಿವಾರ್ಯತೆ ಇದೆ. ಈ ಬಗ್ಗೆ ಉಪನ್ಯಾಸಕರು ಒತ್ತು ನೀಡಬೇಕಿದೆ ಎಂದರು.

ಇತ್ತೀಚೆಗೆ ಮೂಲ ವಿಜ್ಞಾನದ ಬಗ್ಗೆ ವಿದ್ಯಾರ್ಥಿಗಳು ಆಸಕ್ತಿ ಕಳೆದು ಕೊಳ್ಳುತ್ತಿದ್ದು, ವಿಜ್ಞಾನ ಕ್ಷೇತ್ರದಲ್ಲಿ ಅಪರ ಸಾಧನೆ ಮಾಡಬೇಕಾದರೆ ಮೂಲ ವಿಜ್ಞಾನ ಅರಿವು ಹೆಚ್ಚು ಅವಶ್ಯಕ ಎಂದು ತಿಳಿಸಿದರು.

ಪ್ರಾಂಶುಪಾಲ ಪ್ರೊ. ಗಂಗೇಗೌಡ ಮಾತನಾಡಿ, ಯಾವುದೇ ಒಂದು ವಿಷಯವನ್ನು ನಮ್ಮ ಮಾತೃ ಭಾಷೆಯಲ್ಲಿ ಆಲಿಸಿದಾಗ ಮಾತ್ರ ಅದು ನಮ್ಮ ಮನವನ್ನು ಹೊಕ್ಕಲು ಸಾಧ್ಯವಾಗುತ್ತದೆ. ಆ ನಿಟ್ಟಿನಲ್ಲಿ ವಿಜ್ಞಾನದ ಅಂಶಗಳನ್ನು ಕನ್ನಡದಲ್ಲಿ ಬೋಧಿಸುವ, ಅಧ್ಯಯನ ಮಾಡುವ ಹವ್ಯಾಸವನ್ನು ಬೆ...ಳ್ಳಬೇಕಿದೆ ಎಂದು ಸಲಹೆ ನೀಡಿದರು.

ಯಾವುದೇ ಒಂದು ವಿಷಯವನ್ನು ಆಡು ಭಾಷೆ ಅಥವಾ ಮಾತೃಭಾಷೆಯಲ್ಲಿ ಕೇಳಿಸಿಕೊಂಡರೆ ಹೆಚ್ಚು ಕಾಲ ನೆನಪಿನಲ್ಲಿ ಉಳಿದುಕೊಳ್ಳುತ್ತದೆ. ಆದ್ದರಿಂದ ವಿಜ್ಞಾನದ ವಿಷಯಗಳನ್ನು ಪರೀಕ್ಷೆಯ ದೃಷ್ಟಿಯಿಂದ ಅಧ್ಯಯನ ಮಾಡಿ ಮರೆಯುವುದರ ಬದಲಾಗಿ, ಕನ್ನಡ ಭಾಷೆಯಲ್ಲಿ ಓದಿ ಅರ್ಥೈಸಿಕೊಂಡರೆ ಹೆಚ್ಚುಕಾಲ ನೆನಪಿನಲ್ಲಿ ಉಳಿದುಕೊಂಡು ಪರೀಕ್ಷೆಗಳಿಗೆ ಅನುಕೂಲವಾಗುವುದರ ಜತೆ ಭವಿಷ್ಯಕ್ಕೂ ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಯಾವುದೇ ವಿಷಯಗಳನ್ನು ಮಾತೃ ಭಾಷೆಯಲ್ಲಿ ತಿಳಿದು ಕೊಳ್ಳುವುದಕ್ಕಿಂತ ಹೆಚ್ಚಿನದಾಗಿ ಅನ್ಯಭಾಷೆಗಳಿಂದ ತಿಳಿದುಕೊಳ್ಳಲು ಸಾಧ್ಯವಿಲ್ಲ, ಇಂಗ್ಲಿಷ್ ಭಾಷೆಯ ಜತೆ ಕನ್ನಡಕ್ಕೂ ಪ್ರಮುಖ್ಯತೆ ನೀಡಬೇಕು ಎಂದು ಹೇಳಿದರು.

ವಿಜ್ಞಾನವೇದಿಕೆಸಂಚಾಲಕಎಂ.ನಾರಾಯಣಪ್ಪ, ಉಪನ್ಯಾಸಕ ಸುರೇಶ್, ಪ್ರಾಣಿ ಶಾಸ್ತ್ರ ವಿಭಾಗದ ಆದಿನಾರಾಯಣ, ತೋಯಜಾಷ, ಸೌಮ್ಯಾ, ಲೀಲಾವತಿ, ಸುಧಾ ಹಾಜರಿದ್ದರು.

ವಿಕ ಚಿತ್ರಲೋಕ




ಹಾಸನದ ಸರಕಾರಿ ವಿಜ್ಞಾನ ಕಾಲೇಜಿನಲ್ಲಿ ನಡೆದ ಅಂತರ ಕಾಲೇಜುಗಳ ಕನ್ನಡದಲ್ಲಿ ವಿಜ್ಞಾನ ಉಪನ್ಯಾಸ ಸ್ಪರ್ಧೆ ಕಾರ್ಯಕ್ರಮದಲ್ಲಿ ಕರ್ನಾಟಕ ವಿಜ್ಞಾನ ಪರಿಷತ್‌ನ ಜಿಲ್ಲಾ ಸಂಚಾಲಕ ಶ್ರೀನಿವಾಸ್ ನಡೀಕರ್ ಮಾತನಾಡಿದರು.

> **ಯಾವುದೇ ಒಂದು ವಿಷಯವನ್ನು ನಮ್ಮ ಮಾತೃಭಾಷೆಯಲ್ಲಿ ಆಲಿಸಿದಾಗ ಮಾತ್ರ ಅದು ನಮ್ಮ ಮನವನ್ನು ಹೊಕ್ಕಲು ಸಾಧ್ಯವಾಗುತ್ತದೆ. ಆ ನಿಟ್ಟಿನಲ್ಲಿ ವಿಜ್ಞಾನದ ಅಂಶಗಳನ್ನು ಕನ್ನಡದಲ್ಲಿ ಬೋಧಿಸುವ, ಅಧ್ಯಯನ ಮಾಡುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು.**
>
> **-ಪ್ರೊ.ಗಂಗೇಗೌಡ**, ಪ್ರಾಂಶುಪಾಲ, ಸರಕಾರಿ ವಿಜ್ಞಾನ ಕಾಲೇಜು, ಹಾಸನ.

...and got clarified their doubts.

The special guest lecture progra...